( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿನಾಂಕ ಃ 27/11/2019

**ಅಸಲು ದಾವೆ. ನಂ. 180/2009**

ಪಿ.ಡಬ್ಲ್ಯೂಃ 1

( ಮುಂದುವರೆದ ಪಾಟೀ ಸವಾಲು ಎಸ್.ಹೆಚ್.ಆರ್. ವಕೀಲರಿಂದ )

ಸಣ್ಣಸ್ವಾಮಿಯವರು ಹೂಡಿದ್ದ ಅಸಲು ದಾವಾ ನಂಃ 215/1999 ರ ದಾವೆಯಲ್ಲಿ ನಾನು ದಿಃ29-11-2004 ರಂದು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ಸಾಕ್ಷಿ ವಿಚಾರಣೆಯ ದೃಡೀಕೃತ ನಕಲನ್ನು ತೋರಿಸಲಾಗಿ ನೋಡಿ ಒಪ್ಪಿರುತ್ತಾರೆ. ಸದರಿ ದೃಡೀಕೃತ ನಕಲನ್ನು ನಿಡಿ-1 ಎಂದು ಗುರುತಿಸಲಾಯಿತು. ಕೋಟವಾಳು ಗ್ರಾಮದಲ್ಲಿ ನಿವೇಶನ ಮಂಜೂರಾತಿಯ ಬಗ್ಗೆ ನನಗೆ ಯಾವುದೆ ಹಕ್ಕು ಪತ್ರ ನೀಡಿಲ್ಲ. ಕೋಟವಾಳು ಗ್ರಾಮದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಒಂದು ವಾಸದ ಮನೆ ಇದೆ. ನನ್ನ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ.

ಕೋಟವಾಳು ಗ್ರಾಮದ ದಕ್ಷಿಣ ದಿಕ್ಕಿಗೆ ರಾಮನಾಥಪುರ ಗ್ರಾಮ ಇದೆ. ರಾಮನಾಥಪುರದಲ್ಲಿ ನನಗೆ ನಿವೇಶನ ಇದೆ. ಅದನ್ನು ಮಂಡಲ ಪಂಚಾಯಿತಿಯವರು ಸುಮಾರು 25 ವರ್ಷಗಳ ಹಿಂದೆ ಮಂಜೂರು ಮಾಡಿರುತ್ತಾರೆ. ಮಂಡಲ ಪಂಚಾಯಿತಿಯ ಪ್ರಧಾನರಾದ ವಿಶ್ವನಾಥ್ ರವರು ಹಕ್ಕು ಪತ್ರ ನೀಡಿರುತ್ತಾರೆ. ಸದರಿ ನಿವೇಶನದ ವಿಸ್ತೀರ್ಣ ಪೂರ್ವ-ಪಶ್ಚಿಮ 55 ದಕ್ಷಿಣೋತ್ತರ-55 ಅಡಿಗಳು. ಅದರ ಚೆಕ್ಕು ಬಂದಿ ಗೊತ್ತು. ಹಕ್ಕು ಪತ್ರ ಪಡೆದ ವರ್ಷವೇ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ. ಪಂಚಾಯಿತಿಯವರು ಖಾತೆ ಬದಲಾವಣೆ ಮಾಡುವ ಮುಂಚೆ ಮುಟೇಷನ್ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿವೇತನ ಮಂಜೂರಾದ ಬಗ್ಗೆ ಮುಟೇಷನ್ ಪತ್ರ ಪಡೆದುಕೊಂಡಿಲ್ಲ.

ಸಾಮಾನ್ಯವಾಗಿ ನಿವೇಶನಗಳಿಗೆ ವರ್ಷಕ್ಕೆ ಇಂತಿಷ್ಟು ಕಂದಾಯ ವಿದಿಸುತ್ತಾರೆ ಎಂದರೆ ಸರಿ. ನಿವೇಶನಕ್ಕೆ ಎಷ್ಟು ಕಂದಾಯ ವಿದಿಸಿದ್ದಾರೆ ಎಂದು ಗೊತ್ತಿಲ್ಲ. ಮಂಜೂರಾದ ನಂತರ 2-3 ಬಾರಿ ಕಂದಾಯ ಪಾವತಿ ಮಾಡಿರುತ್ತೇನೆ. ಕಂದಾಯ ಪಾವಾತಿ ಮಾಡಿದ ಬಗ್ಗೆ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸಾಮಾನ್ಯವಾಗಿ ಪಂಚಾಯಿತಿಯಲ್ಲಿ ಪ್ರತಿ ವರ್ಷ ಖಾತೆ ದಾರರ ಹೆಸರನ್ನು ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ನ್ಯಾಯಾಲಯಕ್ಕೆ ಒಂದೇ ಡಿಮ್ಯಾಂಡ್ ರಿಜಿಸ್ಟರ್

ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತಿರಿ ಎಂದರೆ ಸಾಕ್ಷಿಯು ಅಷ್ಟು ಹೊತ್ತಿಗೆ ಒತ್ತುವರಿಯಾದ ಕಾರಣ ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ನ್ನು ಸುಮಾರು 25 ವರ್ಷಗಳ ಹಿಂದೆ ವಿಶ್ವನಾಥ್ ರವರಿಂದ ಪಡೆದುಕೊಂಡಿರುತ್ತೇನೆ. ನನ್ನ ಆಸ್ತಿಗೆ ಸಂಬಂದಿಸಿದಂತೆ ಪಂಚಾಯಿತಿಯಲ್ಲಿ ಡಿಮ್ಯಾಂಡ್ ಡಿಜಿಸ್ಟರ್ ನಲ್ಲಿ ನಮೂದು ಇದೆಯೇ ಇಲ್ಲವೋ ಎಂದು ಕೇಳಿಲ್ಲ ಮತ್ತು ಕೇಳಲು ಯಾವುದೇ ತೊಂದರೆ ಇಲ್ಲ.

ವಿಶ್ವನಾಥ್ ರವರ ಸಹಿ ಗುರುತಿಸಲು ಆಗುವುದಿಲ್ಲ. ವಿಶ್ವನಾಥ್ ರವರ ಸಹಿ ನಾನು ನೋಡಿಲ್ಲ ಹಾಗೂ ಅವರು ನನ್ನ ಎದುರಿಗೆ ಯಾವುದೇ ಸಹಿ ಮಾಡಿಲ್ಲ. ನಿಪಿ-1 ಕ್ಕೆ ವಿಶ್ವನಾಥ್ ರವರು ನನ್ನ ಸಮಕ್ಷಮ ಸಹಿ ಮಾಡಿಲ್ಲ. ನಿವೇಶನ ಮಂಜೂರಾತಿ ಪತ್ರದಲ್ಲಿ ಯಾವ ಯಾವ ನಿಭಂದನೆಗಳು ಇವೆ ಎಂದು ನಾನು ತಿಳಿದುಕೊಂಡಿಲ್ಲ. ಸಾಮಾನ್ಯವಾಗಿ ಮಂಜೂರಾತಿ ಪಡೆಯುವಾಗ ಮಂಜೂರಾತಿ ಪಡೆಯುವ ವ್ಯಕ್ತಿಯಾಗಲಿ ಅಥವಾ ಅವರ ಕುಟುಂಬದವರಾಗಲಿ ಸದರಿ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ನಿವೇಶನ, ಮನೆ ಅಥವಾ ಜಮೀನು ಹೊಂದಿರಬಾರದು ಎಂದರೆ ನನಗೆ ಗೊತ್ತಿಲ್ಲ. ಯಾವುದೇ ನಿವೇಶನ ಮಂಜೂರಾದ 2 ವರ್ಷಗೊಳಗೆ ಮನೆಯನ್ನು ನಿರ್ಮಾಣ ಮಾಡಬೇಕು ಎಂಬ ನಿಯಮ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಯಾವುದೇ ಪಂಚಾಯಿತಿಯಿಂದ ಮನೆ ಕಟ್ಟಲು ಪರವಾನಗಿಯನ್ನು ಪಡೆದುಕೊಂಡಿಲ್ಲ ಏಕೆಂದರೆ ಅಷ್ಟು ಹೊತ್ತಿಗೆ ನಿವೇಶನ ಒತ್ತುವರಿಯಾಗಿತ್ತು.

ನಿಪಿ-1 ರ ಅಸಲು ಪ್ರತಿಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ನಿವೇಶನದ ಹಕ್ಕು ಪತ್ರದ ಅಸಲು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸಣ್ಣಸ್ವಾಮಿಯವರ ದಾವೆಯಲ್ಲಿ ನಾನು ಹಾಜರು ಪಡಿಸಿದ್ದ ದಾಖಲೆಗಳನ್ನು ಹಿಂಪಡೆದಿಲ್ಲ. ಅದನ್ನು ಹಿಂಪಡೆಯಲು ತೊಂದರೆ ಇರಲಿಲ್ಲ.

ನನಗೆ ಮಂಜೂರಾದ ಸ್ವತ್ತಿಗೂ ಕೋಟವಾಳು ಗ್ರಾಮದ ಗಡಿಗೂ ಸುಮಾರು ಅರ್ಧ ಕಿ.ಮಿಯ ಅಂತರವಿದೆ. ನನಗೆ ಮಂಜೂರಾದ ನಿವೇಶನದ ಉತ್ತರ ದಿಕ್ಕಿಗೆ ಕೋಟವಾಳು ಗ್ರಾಮದ ಗಡಿ ಬರುತ್ತದೆ. ನಾನು ಹುಟ್ಟಿದ ದಿನಾಂಕ ಗೊತ್ತಿಲ್ಲ. ನನಗೆ ಈಗ 59 ವರ್ಷ. ನನಗೆ 4 ಜನ ಮಕ್ಕಳು ಇದ್ದಾರೆ. ನನ್ನ ಹಿರಿಯ ಮಗ ಕೃಷ್ಣ ಪದವಿ ವ್ಯಾಸಂಗ ಮಾಡಿರುತ್ತಾನೆ.

ಸಣ್ಣಸ್ವಾಮಿಯವರು ಈಗ ಮರಣ ಹೊಂದಿರುತ್ತಾರೆ ಅವರು ಜೀವಂತವಿದ್ದಾಗ ಅವರೊಂದಿಗೆ ಕೆಲಸ ಮಾಡುತ್ತಿದ್ದೆ. ಬಸವರಾಜುಶೆಟ್ಟರು ನನಗೆ ಗೊತ್ತು. ನಾನು ಅವರೊಂದಿಗೆ ಅನ್ಯೋನ್ಯವಾಗಿದ್ದೇನು. ಅವರು ರಾಮನಾಥಪುರ ಪಂಚಾಯಿತಿಯಲ್ಲಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಬಸವರಾಜಶೆಟ್ಟಿ ಮತ್ತು ಸಣ್ಣ ಸ್ವಾಮಿ ವಿಶ್ವಾಸದಿಂದ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸಣ್ಣಸ್ವಾಮಿ ಮತ್ತು ಬಸವರಾಜುಶೆಟ್ಟರು ಸೇರಿ ನಿಪಿ-1 ಹಕ್ಕು ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2 ನ್ನು ನಾನು ಪಂಚಾಯಿತಿ ಅಧಿಕಾರಿಗಳೊಂದಿಗೆ ಷರಿಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿತ್ತು ಎಂದು ನನಗೆ ಗೊತ್ತಿಲ್ಲ. ಅದರ ಬಗ್ಗೆ ದಾಖಲಾತಿಗಳನ್ನು ನಾನು ನೋಡಿಲ್ಲ. ಸದರಿ ಸ್ವತ್ತಿನ ಮೇಲೆ ಮಂಡಲ ಪಂಚಾಯಿತಿಯವರಿಗೆ ಹಕ್ಕು ಇತ್ತೊ ಇಲ್ಲವೋ ಎಂಬ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ. ಈ ದಾವೆಯನ್ನು ಪ್ರತಿವಾದಿಯು ನನ್ನ ನಿವೇಶನವನ್ನು ಒತ್ತುವರಿ ಮಾಡಿ ಮನೆ ಕಟ್ಟಿದ್ದಾರೆ ಎಂದು ಹೂಡಿರುತ್ತೇನೆ. ದಾವಾ ನಿವೇಶನ ರಾಮನಾಥಪುರ ಗ್ರಾಮ ಪಂಚಾಯಿತಿಯ ಉತ್ತರ ಬಡಾವಣೆಯ ಕೋಟವಾಳು ವ್ಯಾಪ್ತಿಯಲ್ಲಿ ಇದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ನನಗೆ ಯಾರು ಮಂಜೂರು ಮಾಡಿಲ್ಲ, ನಾನು ಯಾವತ್ತು ಸದರಿ ಸ್ವತ್ತಿನಲ್ಲಿ ಹಜಕ್ಕು ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಕೋಟವಾಳು ಗ್ರಾಮದಲ್ಲಿ ಯಾವುದೇ ಆಸ್ತಿ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಸ್ವತ್ತನ್ನು ಹೊಡೆದುಕೊಳ್ಳುವ ಸಲುವಾಗಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.